ದಿನಾಂಕ 01.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲುಃ- ವಾದಿ ಪರ ವಕೀಲರಿಂದಃ-</u>**

ನಾನು ವ್ಯವಸಾಯ ಮಾಡಿಕೊಂಡಿದ್ದೇನೆ. ಪ್ರತಿವಾದಿ 1, 3 ಮತ್ತು 4 ರವರು ನನ್ನ ತಮ್ಮಂದಿರು. ದಾವಾಸ್ವತ್ತನ್ನು ನಾನು 1965 ನೇ ಇಸವಿಯಲ್ಲಿ ಕ್ರಯಕ್ಕೆ ಪಡೆದುಕೊಂಡಿದ್ದೆನು. ಸರ್ವೆ ನಂ. 150 ರಲ್ಲಿ ಒಟ್ಟು 7 ಎಕರೆ 62 ಸೆಂಟ್ಸ್ ಇತ್ತು. 1 ನೇ ಪ್ರತಿವಾದಿಯ ಕೋರಿಕೆಯಂತೆ ನಾನು ಸಾಕ್ಷ್ಯ ನುಡಿಯಲು ನ್ಯಾಯಾಲಯಕ್ಕೆ ಬಂದಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನಾನು ಚಿಕ್ಕಮಂಡೂರಿನಲ್ಲಿ ವಾಸವಾಗಿದ್ದೇನೆ.ದಾವಾಸ್ವತ್ತು ಮೂಲತಃ ಪೋಲಂಗಡ ಗಣಪತಿಯವರಿಗೆ ಸೇರಿತ್ತು. ಸದರಿ ಗಣಪತಿಯವರು 1968 ರಲ್ಲಿ ಒಂದು ಎಕರೆ ಸ್ವತ್ತನ್ನು ಕೊಳ್ಳಿಮಾಡ ಪೂವಯ್ಯರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಕ್ರಯಪತ್ರವಾದ ಸಂದರ್ಭದಲ್ಲಿ ನಾನು ಶಿವಮೊಗ್ಗದಲ್ಲಿ ನೆಲೆಸಿದ್ದೆನು. ಅಲ್ಲದೇ 1968 ರಲ್ಲಿ ಗಣಪತಿಯವರು ಸರ್ವೆ ನಂ. 150/1 ರಲ್ಲಿ 5 ಎಕರೆ ಜಮೀನನ್ನು 3 ರಿಂದ 5 ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ನನ್ನ ತಮ್ಮನ ಹೆಸರು ಸಿ.ಎಸ್ ತಮ್ಮಯ್ಯ, ಆತ ಮೃತನಾಗಿದ್ದು, ಪ್ರತಿವಾದಿ 3 ಮತ್ತು 4 ಅವರ ಮಕ್ಕಳು.

1977 ನೇ ಇಸವಿಯಲ್ಲಿ ಈ ದಾವೆಯ ವಾದಿಗಳು ನನ್ನ, ನನ್ನ ತಮ್ಮ ಮತ್ತು ಪ್ರತಿವಾದಿ 4 ಮತ್ತು 5 ರವರುಗಳ ವಿರುದ್ಧ ಅಸಲು ದಾವಾ ಸಂಖ್ಯೆ 38/1977 ನ್ನು ದಾಖಲಿಸಿದ್ದರು ಎಂದರೆ ಸರಿ.

ದಾವಾಸ್ವತ್ತು ವಾದಿಗಳಿಗೆ ಸೇರಿದ ಸ್ವತ್ತು ಎಂದು ಗೊತ್ತಿದ್ದರೂ ಸಹಾ ನಾನು, 6 ಮತ್ತು 7 ನೇ ಪ್ರತಿವಾದಿಗಳಿಂದ 1 ಎಕರೆ ಜಮೀನನ್ನು ಖರೀದಿಸಿರುತ್ತೇನೆ ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ತಮ್ಮ ಸೋಮಯ್ಯ ಖರೀದಿಸಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಸದರಿ ಒಂದು ಎಕರೆ ಸ್ವತ್ತಿನ ಮೇಲೆ ನನಗೆ ಜಂಟಿ ಹಕ್ಕು ಇದೆ ಎಂದರೆ ಸರಿಯಲ್ಲ. ಸದರಿ 1 ಎಕರೆ ಸ್ವತ್ತನ್ನು ಸೋಮಯ್ಯರವರು 2004 ರಲ್ಲಿ ಕೊಡವ ಸಮಾಜಕ್ಕೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ದಾವಾಸ್ವತ್ತನ್ನು ವಾದಿಗಳ ತಂದೆ ಮಾರಾಟ ಮಾಡಿದ ಸಂದರ್ಭದಲ್ಲಿ ವಾದಿಗಳು ಅಪ್ರಾಪ್ತ ವಯಸ್ಕರಾಗಿದ್ದರು ಎಂದರೆ ಸರಿ. ದಾವಾಸ್ವತ್ತು ವಾದಿಗಳ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ. ದಾವೆಯನ್ನು ದಾಖಲಿಸುವುದಕ್ಕಿಂತ ಪೂರ್ವದಲ್ಲಿ ವಾದಿಗಳು ಪ್ರತಿವಾದಿ 6 ಮತ್ತು 7 ರವರುಗಳ ಬಳಿ ಹೋಗಿ ದಾವಾಸ್ವತ್ತನ್ನು ಮರಳಿ ನಮಗೆ ಕೊಡಬೇಕೆಂದು ಕೇಳಿರುತ್ತಾರೆ ಎಂದರೆ ಸರಿ. ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹಾ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.

ಓಎಸ್. **170/2016**

ಡಿಡಬ್ಲ್ಯು-2